**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 346/2014**

**ಸಾಕ್ಷಿಗೆ ದಿನಾಂಕ 23.4.2025 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ವೆಂಕಟೇಶ | ಪಿ.ಡಬ್ಲ್ಯೂ-7 |
| ತಂದೆಯ/ಗಂಡನ ಹೆಸರು | : | ಲೇಟ್ ಬೋಳಯ್ಯ | ಸಿ.ಡಬ್ಲ್ಯೂ-17 |
| ವಯಸ್ಸು | : | 51 | |
| ಉದ್ಯೋಗ | : | ಮಾರಾಟ ಗುಮಾಸ್ತ | |
| ವಾಸಸ್ಥಳ | : | ಸೋಗಳ್ಳಿ | |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಈಗ ನೋಡುತ್ತಿರುವ ನಿಪಿ6 ಮತ್ತು ನಿಪಿ7 ರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನಾನು 2014 ರಿಂದ ಹೆಚ್.ಡಿ.ಕೋಟೆಯ ಲ್ಯಾಂಪ್ಸ ಸೊಸೈಟಿಯಲ್ಲಿ ಮಾರಾಟ ಗುಮಾಸ್ತನಾಗಿ ಕೆಲಸ ಮಾಡುತ್ತಿದ್ದೇನೆ. ದಿನಾಂಕ 12.5.2014 ರಂದು ಹೆಚ್.ಡಿ.ಕೋಟೆ ಪೋಲಿಸರು ಹಣ ದುರುಪಯೋಗವಾಗಿರುವ ವಿಚಾರವಾಗಿ ನಮ್ಮನ್ನು ಠಾಣೆಗೆ ಕರೆಸಿದ್ದು ಸದರಿ ಸಮಯದಲ್ಲಿ ನಾನು ಮತ್ತು ಚಾಸ 14 ರವರು ಹಾಜರಿದ್ದು, ಚಾಸ 14 ರವರು ಈ ಪ್ರಕರಣಕ್ಕೆ ಸಂಬಂಧಿಸಿದ ಲ್ಯಾಂಪ್ಸ ಸೊಸೈಟಿಯ ಬೈಲಾ ಪುಸ್ತಕ, ನಗದು ಪುಸ್ತಕಗಳು, ದಾಸ್ತಾನು ಪುಸ್ತಕಗಳನ್ನು ಅಮಾನತ್ತುಪಡಿಸಿಕೊಂಡು ಸಂಜೆ 4 ರಿಂದ 5 ಗಂಟೆವರೆಗೆ ನಿಪಿ6 ರಂತೆ ಅಮಾನತ್ತು ಪಂಚನಾಮೆಯನ್ನು ಮಾಡಿರುತ್ತಾರೆ. ಸದರಿ ಮೂಲ ಪಂಚನಾಮೆಯು ಸಿ.ಸಿ 344/2014 ರಲ್ಲಿ ಹಾಜರುಪಡಿಸಿದ್ದು ಅದರ ಯಥಾಪ್ರತಿಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಲಾಗಿರುತ್ತದೆ. ಸದರಿ ದಿನ ಹಾಜರುಪಡಿಸಿರುವ ದಾಖಲಾತಿಗಳನ್ನು ಈಗಾಗಲೇ ಸಿ.ಸಿ 344/2014 ರಲ್ಲಿ ನಿಪಿ19 ರಿಂದ ನಿಪಿ23 ಎಂದು ಗುರುತಿಸಲಾಗಿರುತ್ತದೆ.

ದಿನಾಂಕ 22.5.2014 ರಂದು ಹೆಚ್.ಡಿ.ಕೋಟೆ ಪೋಲಿಸರು ನಮ್ಮನ್ನು ಠಾಣೆಗೆ ಕರೆಸಿದ್ದು ಸದರಿ ಸಮಯದಲ್ಲಿ ನಾನು ಮತ್ತು ಚಾಸ 14 ರವರು ಹಾಜರಿದ್ದು, ಚಾಸ 14 ರವರು ಈ ಪ್ರಕರಣಕ್ಕೆ ಸಂಬಂಧಿಸಿದ ಲ್ಯಾಂಪ್ಸ ಸೊಸೈಟಿಯ ಬ್ಯಾಂಕ್ ಪಾಸ್‌ಪುಸ್ತಕ, ವೋಚರ್, ರಶೀದಿ ಪುಸ್ತಕಗಳನ್ನು

ಅಮಾನತ್ತುಪಡಿಸಿಕೊಂಡು ಮಧ್ಯಾಹ್ನ 2 ರಿಂದ 3 ಗಂಟೆವರೆಗೆ ನಿಪಿ7 ರಂತೆ ಅಮಾನತ್ತು ಪಂಚನಾಮೆಯನ್ನು ಮಾಡಿರುತ್ತಾರೆ. ಸದರಿ ಮೂಲ ಪಂಚನಾಮೆಯು ಸಿ.ಸಿ 344/2014 ರಲ್ಲಿ ಹಾಜರುಪಡಿಸಿದ್ದು ಅದರ ಯಥಾಪ್ರತಿಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಲಾಗಿರುತ್ತದೆ. ಸದರಿ ದಿನ ಹಾಜರುಪಡಿಸಿರುವ ದಾಖಲಾತಿಗಳನ್ನು ಈಗಾಗಲೇ ಸಿ.ಸಿ 344/2014 ರಲ್ಲಿ ನಿಪಿ25 ರಿಂದ ನಿಪಿ28 ಎಂದು ಗುರುತಿಸಲಾಗಿರುತ್ತದೆ.

(ಈ ಹಂತದಲ್ಲಿ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದರಿಂದ ಅನುಮತಿಯನ್ನು ನೀಡಲಾಯಿತು.)

**<u>ಪಾಟೀಸವಾಲುಃ ಎಪಿಪಿ ರವರಿಂದಃ</u>**

ದಿನಾಂಕ 12.5.2014 ರಂದು ಪೋಲಿಸರು ಅಮಾನತ್ತು ಪಂಚನಾಮೆ ಮಾಡಿದಾಗ ಕಲಂ64 ರ ವಿಚಾರಾಣಾಧಿಕಾರಿಗಳು ತನಿಖೆಯ ಸಮಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅಧಿಕಾರಿಗಳು ಹಾಗೂ ಸದಸ್ಯರಿಗೆ ನೀಡಿರುವ ಒಟ್ಟು 49 ಪುಟಗಳ ನೋಟಿಸನ್ನು ಸಹ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ದಾಖಲೆಗಳು ಜೆರಾಕ್ಸ ಪ್ರತಿಯಾದ್ದರಿಂದ ಅವುಗಳನ್ನು ನಿಶಾನೆಯಾಗಿ ಗುರುತಿಸಿರುವುದಿಲ್ಲ.

**<u>ಪಾಟೀಸವಾಲುಃ ಆರೋಪಿ ಪರ ಶ್ರೀ ಎ.ಟಿ.ಕೆ ವಕೀಲರಿಂದಃ</u>**

ನಾನು ಮಾರಾಟ ಗುಮಾಸ್ತನಾಗಿ ಲ್ಯಾಂಪ್ಸ ಸೊಸೈಟಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದೇನೆ. ನಾನು ಮಾರಾಟ ಗುಮಾಸ್ತನಾಗಿ ಕರ್ತವ್ಯ ನಿರ್ವಹಿಸುತ್ತಿದ್ದು ಸದರಿ ಸೊಸೈಟಿಗೆ ಸಂಬಂಧಿಸಿದಂತೆ ನಗದು ಪುಸ್ತಕ, ರಶೀದಿ ಪುಸ್ತಕ, ಬ್ಯಾಂಕ್ ಪಾಸ್‌ಪುಸ್ತಕ, ನಡವಳಿಕೆ ಪುಸ್ತಕಗಳನ್ನು ಸಂಘದ ಕಾರ್ಯದರ್ಶಿಯವರು ನೋಡಿಕೊಳ್ಳುತ್ತಾರೆ. ಪೋಲಿಸರು ಅಮಾನತ್ತು ಪಂಚನಾಮೆ ಮಾಡುವ ಬಗ್ಗೆ ನನಗೆ ಲಿಖಿತ ನೋಟಿಸನ್ನು ನೀಡಿರುವುದಿಲ್ಲ. ಅಮಾನತ್ತುಪಡಿಸಿಕೊಂಡ ದಾಖಲೆಗಳ ಮೇಲೆ ಪೋಲಿಸರು ಯಾವುದೇ ಕ್ರಮ ಸಂಖ್ಯೆ ಹಾಗೂ ಸಹಿಯುಳ್ಳ ಚೀಟಿಯನ್ನು ಅಂಟಿಸಿರುವುದಿಲ್ಲ. ನಿಪಿ19 ಮತ್ತು ನಿಪಿ24 ನ್ನು ಬರೆಯಲು ಪೋಲಿಸರಿಗೆ ಚಾಸ 14 ರವರು ಮಾಹಿತಿಯನ್ನು ನೀಡಿರುತ್ತಾರೆ. ನನ್ನ ಸಮಕ್ಷಮ ಸದರಿ ಮಹಜರನ್ನು ಪೋಲಿಸರು ಬರೆದಿರುತ್ತಾರೆ. ನಿಪಿ19 ಮತ್ತು ನಿಪಿ24 ನ್ನು ಪೋಲಿಸರು ಠಾಣೆಯಲ್ಲಿ ತಯಾರಿಸಿ ನಮ್ಮಗಳ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅಮಾನತ್ತುಪಡಿಸಿಕೊಂಡ ದಾಖಲೆಗಳು ಯಾವ ವರ್ಷಕ್ಕೆ ಸಂಬಂಧಿಸಿರುತ್ತವೆ ಎಂದು ಹೇಳಲು ನನಗೆ ಸಾಧ್ಯವಿಲ್ಲ. ನಿಪಿ24 ರಂತೆ ಮಹಜರ್ ಮಾಡಲು ಪೋಲಿಸರು ನನಗೆ ನೋಟಿಸನ್ನು ನೀಡಿರುವುದಿಲ್ಲ. ನಿಪಿ24 ರಂತೆ ಅಮಾನತ್ತುಪಡಿಸಿಕೊಂಡ ಬ್ಯಾಂಕ್ ಪಾಸ್‌ಪುಸ್ತಕ ಹಾಗೂ ವೋಚರ್ ಯಾವ ವರ್ಷಕ್ಕೆ

ಸಂಬಂಧಿಸಿರುತ್ತವೆ ಎಂದು ಹೇಳಲು ನನಗೆ ಸಾಧ್ಯವಿಲ್ಲ. ಪೋಲಿಸರು ಸೃಷ್ಟಿ ಮಾಡಿರುವ ನಿಪಿ24 ದಾಖಲೆಗೆ ನಾನು ಮತ್ತು ಚಾಸ 14 ರವರು ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ಪೋಲಿಸರು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲೆಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಹಾಗೂ ಯಾವುದೇ ಅಮಾನತ್ತು ಪಂಚನಾಮೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ